### ತೋಟಗಾರಿಕೆ ಮೇಳದ ಉದ್ಘಾಟಿಸಿ ಪದ್ಮಶ್ರೀ ಸತ್ಯನಾರಾಯಣ ಬೆಳೇರಿ

# ಕೃಷಿ ತಳಿಗಳ ಸಂರಕ್ಷಣೆ ಅಗತ್ಯ



**ವಿಟ್ಲ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರದಲ್ಲಿ ತೋಟಗಾರಿಕೆ ಮೇಳದ ಉದ್ಘಾಟನೆಯನ್ನು ತಳಿ ಸಂಶೋಧಕ ಮತ್ತು ಸಂರಕ್ಷಕ ಪದ್ಮಶ್ರೀ ಸತ್ಯನಾರಾಯಣ ಬೆಳೇರಿ ಉದ್ಘಾಟಿಸಿದರು.**

■ **ವಿಕ ಸುದ್ದಿಲೋಕ** ವಿಟ್ಲ

ಭತ್ತ ಸೇರಿದಂತೆ ಕೃಷಿ ತಳಿಗಳ ಸಂರಕ್ಷಣೆ ಅಗತ್ಯ ಮತ್ತು ಅನಿವಾರ್ಯ ಎಂದು ತಳಿ ಸಂಶೋಧಕ ಮತ್ತು ಸಂರಕ್ಷಕ ಪದ್ಮಶ್ರೀ ಸತ್ಯನಾರಾಯಣ ಬೆಳೇರಿ ಹೇಳಿದರು.

ಅವರು ಬುಧವಾರ ವಿಟ್ಲ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರದಲ್ಲಿ ನಡೆದ ತೋಟಗಾರಿಕೆ ಮೇಳದ ಉದ್ಘಾಟನೆ ನೆರವೇರಿಸಿ, ಮಾತನಾಡಿದರು.

ಪದ್ಮಶ್ರೀಯಂತಹ ಉನ್ನತ ಗೌರವ ನಿರೀಕ್ಷೆ ಮಾಡಿರಲಿಲ್ಲ, ಮಲೆಯಾಳಂ ಮನೆ ಭಾಷೆಯ ನಾನು ಕನ್ನಡ ಕಲಿತು ಕನ್ನಡಿಗರ ಜತೆ ಬೆಳೆದೆ. ನನ್ನ ಕೃಷಿ ಚಟುವಟಿಕೆಗಳನ್ನು ಕನ್ನಡ ನಾಡಿನ ಕೃಷಿ ಸಂಘಟನೆಗಳು, ಸಂಸ್ಥೆಗಳು ಗುರುತಿಸಿದವು. ಮಂಗಳೂರಿನ ಕೃಷಿ ಕೇಂದ್ರದ ಶಿಫಾರಸಿನಿಂದ ಪದ್ಮಶ್ರೀ ಪುರಸ್ಕಾರ ಬಂತು ಎಂದವರು ನುಡಿದರು.

ತೋಟಗಾರಿಕೆ ಮೇಳದ ಕೃಷಿ ವಸ್ತು ಪ್ರದರ್ಶನ ಮಳಿಗೆಗಳನ್ನು ಅವರು ಉದ್ಘಾಟಿಸಿದರು. ಬೆಳೇರಿಯವರನ್ನು ಕೇಂದ್ರೀಯ ತೋಟಗಾರಿಕೆ ಬೆಳೆಗಳ ಸಂಶೋಧನಾ ಕೇಂದ್ರ ವತಿಯಿಂದ ಸನ್ಮಾನಿಸಲಾಯಿತು. ಹಿರಿಯ ವಿಜ್ಞಾನಿ ಡಾ. ಎಂ.ಕೆ. ರಾಜೇಶ್ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡಿನ ಡಾ. ವಿ. ನಿರಲ್ ಮತ್ತು ಡಾ. ಎನ್. ಎಲೈನ್ ಅಪ್ಸರಾ ಭಾಗವಹಿಸಿದ್ದರು. ನಯನಾ ಮತ್ತು ಸಂಗಡಿಗರು ಪ್ರಾರ್ಥನೆ ಹಾಡಿದರು. ಡಾ. ನಾಗರಾಜ್ ಸ್ವಾಗತಿಸಿದರು. ಡಾ. ಮಧು ಟಿ. ಎನ್. ವಂದಿಸಿದರು. ಡಾ. ಭವಿಷ್ಯ ನಿರೂಪಿಸಿದರು.

## ಕೃಷಿ ವಿಚಾರ ವಿನಿಮಯ

**ರೈತರು ಹಾಗೂ ಕೃಷಿ ವಿಜ್ಞಾನಿಗಳು ಅಡಕೆ ಎಲೆ ಚುಕ್ಕಿ ರೋಗ ಸಹಿತ ವಿವಿಧ ವಿಷಯಗಳ ಮೇಲೆ ವಿಚಾರ ವಿನಿಮಯ ಮಾಡಿಕೊಂಡರು. ಅಡಕೆ,ತೆಂಗು, ಕೊಕ್ಕೊ, ಗೇರು, ಸಾಂಬಾರ ಬೆಳೆಗಳ ಕುರಿತು ನಡೆದ ಸಂವಾದದಲ್ಲಿ ಡಾ. ನಾಗರಾಜ್, ಡಾ.ರಂಜಿನಿ, ದಿವಾಕರ ರೈ, ಡಾ. ಎಸ್.ಎಲೈನ್ ಅಪ್ಸರ, ಡಾ.ಮಂಜೇಶ್ ಜಿ.ಎನ್., ಡಾ.ಅಕ್ಷಿತಾ ಎಚ್.ಜೆ. ಮತ್ತಿತರರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ಕೃಷಿಗೆ ಸಂಬಂಧಿಸಿದಂತೆ ರಸಪ್ರಶ್ನೆಗಳನ್ನು ನಡೆಸಲಾಯಿತು. ಗೇರು ಮತ್ತು ಕೊಕ್ಕೊ ಅಭಿವೃದ್ಧಿ ನಿರ್ದೇಶನಾಲಯ, ಕೃಷಿ ಸಚಿವಾಲಯ ಮತ್ತು ರೈತ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ವಿಟ್ಲದ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ ಆವರಣ ದಲ್ಲಿ ತೋಟಗಾರಿಕೆ ಮೇಳ ಆಯೋಜಿಸಲಾಗಿತ್ತು.**